ನೇಕಾರರು ಕೈಮಗ್ಗದಲ್ಲಿ ನೇಯುವ ಪಟ್ಟೇದಂಚು ಸೀರೆಗಳಿಗೆ ಅಪಾರ ಜನಪ್ರಿಯತೆ ಇದೆ. ನೇಕಾರರ ನೇಯ್ಗೆಯ ಕೌಶಲ, ನೈಸರ್ಗಿಕ ಉತ್ಪನ್ನಗಳ ಬಳಕೆ ಹಾಗೂ ಗಜೇಂದ್ರಗಡದ ಪ್ರಾದೇಶಿಕ ಹಿನ್ನೆಲೆಯಲ್ಲಿ ಸಹಕಾರಿ ಸಂಘವು ಜಿಐ ಟ್ಯಾಗ್ ಪಡೆಯಲು ಶ್ರಮಿಸಿತ್ತು. 2019ರಿಂದ ನಡೆಸಿದ ಪ್ರಯತ್ನಕ್ಕೆ 2025ರ ಮಾರ್ಚ್‌ನಲ್ಲಿ ಫಲ ಸಿಕ್ಕಿದೆ.

### 400 ವರ್ಷಗಳ ಇತಿಹಾಸ

ಪಟ್ಟೇದಂಚು ಸೀರೆಗೆ ಸುಮಾರು 400 ವರ್ಷಗಳ ಇತಿಹಾಸವಿದ್ದು, ಪರಿಶುದ್ಧ ಹತ್ತಿಯ ನೂಲಿನಿಂದ ತಯಾರಾಗುವ ಕಾರಣಕ್ಕಾಗಿಯೇ ಈ ಸೀರೆ ಸರ್ವಋತುವಿನಲ್ಲೂ ಧರಿಸಲು ಆರಾಮದಾಯಕ. ಚಳಿಗಾಲದಲ್ಲಿ ಬೆಚ್ಚಗೆ, ಬೇಸಿಗೆಯಲ್ಲಿ ತಂಪಿನ ಅನುಭೂತಿ ನೀಡುವ ಈ ಸೀರೆ ತನ್ನ ವಿನ್ಯಾಸ, ಬಣ್ಣಗಳ ಕಾರಣಕ್ಕಾಗಿ ಯುವತಿಯರಿಂದ ಹಿಡಿದು ಹಿರಿಯ ಮಹಿಳೆಯರಿಗೂ ಅಚ್ಚುಮೆಚ್ಚು.

### ಅಂಟಿನ ನಂಟು

ಪಟ್ಟೇದಂಚು ಸೀರೆಯ ನೂಲಿನಲ್ಲಿ ಬಿಗಿ ಹಿಡಿತ ಸಾಧಿಸುವಲ್ಲಿ ನೈಸರ್ಗಿಕ ಅಂಟಿನ ಪಾತ್ರ ಮಹತ್ವದ್ದು. ನೇಯ್ಗೆಗೆ ಬಳಸಲಾಗುವ ಶುದ್ಧ ಹತ್ತಿಯ, ಬಣ್ಣ ಹಾಕಿದ ನೂಲನ್ನು ನೈಸರ್ಗಿಕವಾಗಿ ಸಿಗುವ ಜಾಲಿಯ ಮರದ ಅಂಟಿನಲ್ಲಿ ಒಂದು ದಿನದ ನೆನೆಸಿಡಲಾಗುತ್ತದೆ. ಬಳಿಕ ಆ ನೂಲನ್ನು ಸೀರೆ ನೇಯಲು ಬಳಸಲಾಗುತ್ತದೆ. ಸುಮಾರು 6.20 ಮೀಟರ್ ಉದ್ದದ ಈ ಸೀರೆಯ ತೂಕ 550 ಗ್ರಾಂ. ಈ ಹಿಂದೆ ದಪ್ಪ ನೂಲಿನಿಂದ ತಯಾರಾಗುತ್ತಿದ್ದ ಸೀರೆಗಳ ತೂಕ ಬರೋಬ್ಬರಿ 1,100 ಗ್ರಾಂ ಇರುತ್ತಿತ್ತು. ಈಗ ಬದಲಾದ ಕಾಲಘಟ್ಟಕ್ಕೆ ತಕ್ಕಂತೆ ಹೆಂಗಳೆಯರಿಗೆ ಧರಿಸಲು ಆರಾಮದಾಯಕವಾಗಿರುವಂತೆ ಸೀರೆಯ ತೂಕವನ್ನು ಅರ್ಧಕ್ಕರ್ಧ ಕಡಿಮೆ ಮಾಡಲಾಗಿದೆ.

### ಸೀರೆಯ ವೈಶಿಷ್ಟ್ಯ

ಪಟ್ಟೇದಂಚು ಸೀರೆಗಳ ಒಡಲಿನಲ್ಲಿ ಕೆಂಪು ಮತ್ತು ಕಪ್ಪು ಬಣ್ಣಗಳ ಬಳಕೆ ಹೆಚ್ಚು. ಇದಕ್ಕೆ ವಿರುದ್ಧ ಬಣ್ಣಗಳ ಅಂಚು (ಬಾರ್ಡರ್) ಸೀರೆಯ ಅಂದ ಹೆಚ್ಚಿಸುತ್ತದೆ. ಮುಂಚೆ ಅರಿಶಿನ ಬಣ್ಣದ ಒಡಲು, ಕೆಂಪಂಚಿನ ಸೀರೆಗಳು ಜನಪ್ರಿಯವಾಗಿದ್ದವು. ಇತ್ತೀಚೆಗೆ ಗಾಢ ಬಣ್ಣಗಳ ಜತೆಗೆ ತಿಳಿ ಬಣ್ಣಗಳನ್ನೂ ಬಳಸಲಾಗುತ್ತಿದೆ. ಮುಖ್ಯವಾಗಿ ನೈಸರ್ಗಿಕ ಬಣ್ಣಗಳನ್ನು ಬಳಸಿ ತಯಾರಾಗುವ ಈ ಸೀರೆಗಳು ಚರ್ಮಕ್ಕೂ ಹಿತಕಾರಿ. ಸೀರೆಯೊಳಗೆ ಸಣ್ಣ ಚೌಕುಳಿ ಇದ್ದಲ್ಲಿ ಅದನ್ನು ಸಾಸವಿ ಕಡ್ಡಿ ಅಂತಲೂ, ದೊಡ್ಡ ಚೌಕುಳಿ ಇದ್ದಲ್ಲಿ ಅದನ್ನು ರಾಗಾವಳಿ ಅಂತಲೂ ಕರೆಯಲಾಗುತ್ತದೆ. ಹಳದಿ, ಕೆಂಪು ಪಟ್ಟೆಯ 'ರುದ್ರಾಕ್ಷಿ ಗಂಟೆ' ಹಾಗೂ ಕೊಂಡಿ ಚಿಕ್ಕಿ ವಿನ್ಯಾಸದ ಸೀರೆ ಹೆಚ್ಚು ಜನಪ್ರಿಯ.

### ದೇವರಿಗೂ ಪ್ರಿಯ!

ಹಳದಿ ಒಡಲು ಕೆಂಪು ಪಟ್ಟೇದಂಚಿನ ಸೀರೆಯನ್ನು ದೇವರಿಗೆ ಉಡಿಸುವುದು ಶ್ರೇಷ್ಠ ಎಂದು ಭಾವಿಸಲಾಗುತ್ತಿತ್ತು. ಇತ್ತೀಚೆಗೆ ಬದಲಾದ ಫ್ಯಾಷನ್ ಪರಿಭಾಷೆಗೆ ತಕ್ಕಂತೆ ಸಿಂಗಲ್ ಬಾರ್ಡರ್ ಜತೆಗೆ ಡಬಲ್ ಬಾರ್ಡರ್ ಸೀರೆಯನ್ನೂ ನೇಯಲಾಗುತ್ತಿದೆ. ಸುಮಾರು 35ರಿಂದ 40 ಬಗೆಯ ಬಣ್ಣಗಳಲ್ಲಿ ತಯಾರಾಗುವ ಸೀರೆಗಳು, ಜಾಗತಿಕ ಮಟ್ಟದಲ್ಲೂ ಹೆಸರು ಪಡೆದಿವೆ ಎನ್ನುತ್ತಾರೆ ಗಜೇಂದ್ರಗಡ ನೇಕಾರರ ಸಹಕಾರಿ ಉತ್ಪಾದಕ ಸಂಘದ ಸಿಇಒ ಮಾರುತಿ ಕಳಕಪ್ಪ ಶ್ಯಾಬಾದಿ.




ನೇಕಾರ ತೇಜಪ್ಪ ಚಿನ್ನೂರ ಅವರು ತಯಾರಿಸಿರುವ 'ಸಿಂಧೂರ ಚೆಕ್ಸ್ ಸೀರೆ'

> ನಮ್ಮ ಸಂಘದ ಉತ್ಪನ್ನವಾದ ಪಟ್ಟೇದಂಚು ಸೀರೆಗೆ ಜಿಐ ಮಾನ್ಯತೆ ಸಿಕ್ಕಿರುವ ಯಶಸ್ಸು ಎಲ್ಲ ನೇಕಾರರಿಗೆ ಸಲ್ಲುತ್ತದೆ. ಸೀರೆಯ ಮಾರುಕಟ್ಟೆ ವಿಸ್ತರಣೆಯಾಗಿ, ಒಳ್ಳೆಯ ಬೇಡಿಕೆ ಬರಬಹುದೆಂಬ ನಿರೀಕ್ಷೆ ಇದೆ.
>
> **-ಅಶೋಕ ಹನುಮಂತಪ್ಪ ವನ್ನಾಲ್,**
>
> ಅಧ್ಯಕ್ಷ, ಗಜೇಂದ್ರಗಡ ನೇಕಾರರ ಸಹಕಾರಿ ಉತ್ಪಾದಕ ಸಂಘ



### ಪ್ರಯೋಗಶೀಲತೆ

'ಆಪರೇಷನ್ ಸಿಂಧೂರ'ದ ಯಶಸ್ಸಿನ ಹಿನ್ನೆಲೆಯಲ್ಲಿ ನೇಕಾರ ತೇಜಪ್ಪ ಚಿನ್ನೂರ ಅವರು ತಯಾರಿಸಿದ್ದ 'ಸಿಂಧೂರ ಚೆಕ್ಸ್ ಸೀರೆ'ಗೆ ಈಚೆಗೆ ರಾಜ್ಯಮಟ್ಟದ ಅತ್ಯುತ್ತಮ ವಿನ್ಯಾಸ ಪ್ರಶಸ್ತಿ ದೊರೆತಿದೆ. ಇದೇ ಸೀರೆಯಲ್ಲಿ ಕನ್ನಡ ಬಾವುಟದ ಬಣ್ಣ ಹಾಗೂ 'ಕನ್ನಡ' ಎನ್ನುವ ಪದವನ್ನೂ ಕೈಮಗ್ಗದಲ್ಲೇ ನೇಯ್ದಿರುವುದು ವಿಶೇಷವಾಗಿದೆ.

ಗಜೇಂದ್ರಗಡದಲ್ಲಿ ಉತ್ಪಾದನೆಯಾಗುವ ಪಟ್ಟೇದಂಚು ಸೀರೆಯ ಬೆಲೆ ಸಾವಿರ ರೂಪಾಯಿಯ ಒಳಗಿದ್ದು, ಕರ್ನಾಟಕ, ತಮಿಳುನಾಡು, ಆಂಧ್ರ ಸೇರಿದಂತೆ ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಉತ್ತರ ಭಾರತದ ವಿವಿಧ ರಾಜ್ಯಗಳಿಗೂ ರಫ್ತಾಗುತ್ತಿವೆ. ಈಚೆಗೆ ಫೇಸ್‌ಬುಕ್, ವಾಟ್ಸ್ಆ್ಯಪ್ ಸೇರಿದಂತೆ ಇತರ ಆ್ಯಪ್‌ಗಳ ಮೂಲಕವೂ ಸೀರೆಯನ್ನು ಗ್ರಾಹಕರಿಗೆ ಮಾರಾಟ ವ್ಯವಸ್ಥೆ ರೂಪಿಸಲಾಗಿದೆ. ■